**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 584/2024**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಪಾದ ನಾಯ್ಕ |
| ತಂದೆಯ ಹೆಸರು | ಮಂಜುನಾಥ ನಾಯ್ಕ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ವ್ಯಾಪಾರ |
| ವಾಸ್ತವ್ಯ | ಮಾಗೋಡು, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 28-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಕಳೆದ 3 ವರ್ಷಗಳಿಂದ ಮಂಕಿಯಲ್ಲಿ ಭೈರವ ಕೃಷ್ಣ ನಾಯ್ಕರವರ ಗಣೇಶ ಕಾಂಪ್ಲೆಕ್ಸನಲ್ಲಿ ಒಂದು ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ಅಗ್ರಿಕಲ್ಚರ್ ಮಶಿನ್ ಪವರ್ ಟೂಲ್ಸಗಳನ್ನು ಮಾರಾಟ ಮಾಡುತ್ತೇನೆ. ಮಶಿನ್‌ಗಳ ರಿಪೇರಿ ಕೆಲಸವನ್ನೂ ಸಹ ಮಾಡುತ್ತೇನೆ. ಅಂಗಡಿಯಲ್ಲಿ ಉಪಕರಣಗಳ ಮಾರಾಟಕ್ಕಾಗಿ ಚಾಸಾ-8 ರವರನ್ನು ಇಟ್ಟುಕೊಂಡಿದ್ದೇನೆ. ರಿಪೇರಿ ಕೆಲಸಕ್ಕಾಗಿ ಚಾಸಾ-9 ರವರನ್ನು ಇಟ್ಟುಕೊಂಡಿದ್ದೇನೆ. ಅಂಗಡಿ ಕೀ ಅವರಿಬ್ಬರ ಬಳಿಯೂ ಇರುತ್ತದೆ. ಪ್ರತಿನಿತ್ಯ ಬೆಳಿಗ್ಗೆ 09-30 ಕ್ಕೆ ಚಾಸಾ-8 ರವರು ಬಂದು ಬಾಗಿಲು ತೆಗೆಯುತ್ತಾರೆ. ಪ್ರತಿದಿನ ಸಂಜೆ 07-30 ಕ್ಕೆ ಚಾಸಾ-9 ರವರು ಬಾಗಿಲು ಹಾಕಿಕೊಂಡು ಹೋಗುತ್ತಾರೆ.

ದಿನಾಂಕ 18-09-2024 ರಂದು ಎಂದಿನಂತೆ ರಾತ್ರಿ 07-30 ಕ್ಕೆ ಚಾಸಾ-9 ರವರು ಅಂಗಡಿ ಬಾಗಿಲು ಹಾಕಿಕೊಂಡು ಹೋಗಿದ್ದು ಮರುದಿನ ಬೆಳಿಗ್ಗೆ ಕಟ್ಟಡದ ಮಾಲೀಕರಾದ ಚಾಸಾ-10 ರವರು ಫೋನ್ ಮಾಡಿ ನಿಮ್ಮ ಅಂಗಡಿಯ ಶಟ್ರಸ್ ಅರ್ಧ ತೆರೆದಿದ್ದು ಏನೋ ಆಗಿದೆ ಅಂತ ತಿಳಿಸಿದರು. ತಕ್ಷಣ ನಾನು ಮನೆಯಿಂದ ಬಂದು ಅಂಗಡಿ ನೋಡಲಾಗಿ ಅಂಗಡಿಯ ಒಳಗೆ ಇದ್ದ 2 ಕ್ಲಿಪ್ ಹಾಟ್ ಏರಗನ್ ಮಶಿನ್ ಕಳ್ಳತನ ಆಗಿದ್ದವು. ಪ್ರತಿಯೊಂದು ಮಶಿನಗೆ ರೂ.3,000-00 ಇದ್ದು ಅವುಗಳ ಬೆಲೆ 6 ಸಾವಿರ ರೂಪಾಯಿ ಆಗುತ್ತದೆ. ಅಂಗಡಿಯಿಂದ ಆಚೆ ಬಂದು ನೋಡಿದಾಗ ಅಲ್ಲಿ ಚಾಸಾ-11 ರವರ ಲಾರಿ ಮತ್ತು ಜೆಸಿಬಿ ನಿಲ್ಲಿಸಿದ್ದು, ಚಾಸಾ-11 ರವರು ಅವರ ಲಾರಿ ಮತ್ತು ಜೆಸಿಬಿಯಲ್ಲಿದ್ದ 2 ಬ್ಯಾಟರಿ ಕಳ್ಳತನ ಆಗಿರುವುದಾಗಿ ತಿಳಿಸಿದರು. ಅಂಗಡಿಯಲ್ಲಿ ಕಳ್ಳತನ ಆಗಿದ್ದ ವಿಚಾರವಾಗಿ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ನನ್ನ ಅಂಗಡಿಯಲ್ಲಿ ಕೆಲಸ ಮಾಡುವ ಚಾಸಾ-8 ರವರ ಕೈಯಲ್ಲಿ ಬರೆಸಿರುತ್ತೇನೆ.

ಅದೇ ದಿನ ಮಧ್ಯಾಹ್ನ 01-30 ರಿಂದ 02-00 ಗಂಟೆ ಸಮಯಕ್ಕೆ ಪೋಲೀಸರು ನನ್ನ ಅಂಗಡಿಗೆ ಬಂದು ಫೋಟೋ ತೆಗೆದು ಅಂಗಡಿಯ ಮುಂದೆ ಇದ್ದ ಲಾರಿ ಮತ್ತು ಜೆಸಿಬಿ ಫೋಟೋ ತೆಗೆದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ

ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಫೋಟೋ ನೋಡುತ್ತಿದ್ದು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ</u>**

ಸದರಿ ಕಾಂಪ್ಲೆಕ್ಸನಲ್ಲಿ 2 ಹೋಟೆಲ್ ಮತ್ತು 8 ರಿಂದ 10 ಮಳಿಗೆಗಳು ಇವೆ. ನನ್ನ ಅಂಗಡಿಗೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಘಟನಾ ಕಾಲಕ್ಕೆ ಕಾಂಪ್ಲೆಕ್ಸನ ಮುಂಭಾಗದಲ್ಲಿ ಸಿಸಿ ಕ್ಯಾಮರಾ ಹಾಕಿರಲಿಲ್ಲ. ಆದರೆ ನನ್ನ ಅಂಗಡಿಯ ಒಳಗೆ ನಾನು ಸಿಸಿ ಕ್ಯಾಮರಾ ಅಳವಡಿಸಿದ್ದೇನೆ. ಆ ದಿನ ನನ್ನ ಅಂಗಡಿಯಲ್ಲಿ ಕಳುವು ಆಗಿದ್ದ ಮಶಿನಗಳನ್ನು ಹೊರತುಪಡಿಸಿ ಬೇರೆ ಬೇರೆ ಮಶಿನಗಳು ಇದ್ದವು. ನಾನು ಅಂಗಡಿಗೆ ಹೋಗಿ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಒಂದು ಸ್ವಿಫ್ಟ ಕಾರ್ ಬಂದು ಅಂಗಡಿಯ ಮುಂದೆ ನಿಂತಿರುವುದು ಕಂಡುಬಂದಿರುತ್ತದೆ. ಕಾರು ಬಂದು ನಿಂತ ನಂತರ ಸದರಿ ಕ್ಯಾಮರಾವನ್ನು ಒಡೆದು ಹಾಕಲಾಗಿದೆ. ಕಾರು ಅಂಗಡಿಯ ಮುಂಭಾಗದಲ್ಲಿ ಒಂದು ಕಡೆ ನಿಲ್ಲಿಸಿರುತ್ತಾರೆ. ಹೊರಗಡೆ ಇದ್ದ ಸಿಸಿಟಿವಿ ಒಡೆಯುವ ಕಾಲಕ್ಕೆ ಬಲ್ಬನ್ನು ಒಡೆದಿರುವುದರಿಂದ ಶಾರ್ಟ ಸರ್ಕ್ಯುಟ್ ಆಗಿ ಒಳಗೆ ಇದ್ದ ಸಿಸಿ ಕ್ಯಾಮರಾ ಕೂಡ ಆಫ್ ಆಗಿರುತ್ತದೆ. ಸಿಸಿಟಿವಿ ಕ್ಯಾಮರಾ ಒಡೆಯುವ ಪೂರ್ವದಲ್ಲಿ ಕ್ಯಾಮರಾ ಒಡೆಯುವ ದೃಶ್ಯ ಇರಲಿಲ್ಲ. ಕಾರು ಬಂದು ನಿಂತಿರುವುದು ಕಾಣಿಸುತ್ತದೆ. ಅದು ಸಿಲ್ವರ್ ಬಣ್ಣದ ಕಾರು. ನಂಬರ್ ಕಾಣಿಸುತ್ತಿರಲಿಲ್ಲ. ಸಿಸಿ ಕ್ಯಾಮರಾ ಫುಟೇಜನ್ನು ಪೋಲೀಸರು ತೆಗೆದುಕೊಂಡಿರುತ್ತಾರೆ. ದೂರು ನೀಡುವ ಮೊದಲೇ ಪೋಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿರುತ್ತಾರೆ. ದೂರಿನಲ್ಲಿ ಕಾರು ಬಂದಿರುವ ವಿಚಾರ ಮತ್ತು ನಾನು ಸಿಸಿ ಕ್ಯಾಮರಾದಲ್ಲಿ ನೋಡಿರುವ ವಿಚಾರವನ್ನು ಬರೆಸಿರುವುದಿಲ್ಲ. ಸಿಸಿ ಕ್ಯಾಮರಾ ಫುಟೇಜನ್ನು ಪಂಚನಾಮೆಯಡಿಯಲ್ಲಿ ತೆಗೆದುಕೊಂಡು ಹೋಗಿರುವುದಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿಯೇ ಅದನ್ನು ತೆಗೆದುಕೊಂಡು ಹೋಗಿರುತ್ತಾರೆ. ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಪಂಚನಾಮೆಯ ಟೈಪಿಂಗ್ ಅಂಗಡಿಯ ಮುಂಭಾಗದಲ್ಲಿ ಮಾಡಿರುತ್ತಾರೆ. ಅಂಗಡಿಯಲ್ಲಿ ಯಾವುದೇ ಕಳುವು ಆಗದೇ ಇದ್ದರೂ ವಿಮಾ ಹಣವನ್ನು ಪಡೆದುಕೊಳ್ಳಲು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**